ಬಿದ್ದಿವೆ. ಹೋದವರ್ಷ ಮಾಡಿದ್ದರೆ ಬಹಳ ಸುಲಭವಾಗಿ ಆಗುತ್ತಿತ್ತು. ಈ ವರ್ಷ ಬಹಳ ಹದಗೆಟ್ಟಿವೆ. ಈ ವರ್ಷವಾದರೂ ಮಾಡದೇ ಇದ್ದರೆ ಆ ರಸ್ತೆಗಳು ಉಪಯೋಗಕ್ಕೆ ಬರುವುದಿಲ್ಲ. ದಯವಿಟ್ಟು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗ ಆ ರಸ್ತೆಗಳನ್ನು ದುರಸ್ತಿಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ವಿನಂಕತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ರೇವುನಾಯಕ್ ಬೆಳಮಗಿ ಅವರ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವು ರಸ್ತೆಗಳು ಬಹಳ ಹಾಳಾಗಿವೆ. ಅದಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :ಸನ್ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಅವರು ಎತ್ತಿದಾಗ ಈ ಗ್ರಾಮೀಣ ರಸ್ತೆಗಳ ವಿಚಾರವನ್ನು ಅವರು ಬರೆದಿರಲಿಲ್ಲ. ಮತ್ತೆ ಅನುದಾನದಲ್ಲಿ ಕೊಡತಕ್ಕಂಥ, ಸಂದರ್ಭದಲ್ಲಿ ಈ ವರ್ಷದ ಕ್ರಿಯಾಯೋಜನೆಯಲ್ಲಿ ಆ ರಸ್ತೆಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಅವರೂ ಸದಸ್ಯರಾಗಿರುವುದರಿಂದ ಜಿಲ್ಲಾ ವ್ಯಾಪ್ತಿಯಲ್ಲಿ ಬರತಕ್ಕಂಥ ಹಣದಲ್ಲಿ ಅದನ್ನು ತಾವೇ ಕ್ರಿಯಾಯೋಜನೆಯಲ್ಲಿ ಸೇರಿಸಬೇಕಾದ ಜವಾಬ್ದಾರಿ ತಮ್ಮ ಮೇಲಿದೆ. ಇಲ್ಲಿ ರಾಜ್ಯ ಸರ್ಕಾರ ಯಾವುದೇ ನಿರ್ದೇಶನವನ್ನು ಜಿಲ್ಲಾ ಪಂಚಾಯತಿಗೆ ಕೊಡುವುದಕ್ಕೆ ಬರುವುದಿಲ್ಲ. ಆದರೂ ಕೂಡ ತಾವು ಬರೆದು ಕಳುಹಿಸಿದಂಥಾದ್ದಕ್ಕೆ ಸೂಕ್ತ ನಿರ್ದೇಶನ ಕೊಟ್ಟು ಅದನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿಕೊಳ್ಳಿ ಎಂದು ನಾನು ಶಿಫಾರಸ್ಸು ಮಾಡುತ್ತೇನೆ.

ಶ್ರೀ ರೇವುನಾಯಕ ಬೆಳಮಗಿ : ತಾವು ಜಿಲ್ಲಾ ಪಂಚಾಯ್ತಿಯವರಿಗೆ ಸೂಕ್ತ ನಿರ್ದೇಶನ ಕೊಡಬೇಕು. ಅವರು, ನಾವು ಹೇಳಿದರೆ ಕೇಳುತ್ತಾ ಇಲ್ಲಾ. ದಯವಿಟ್ಟು ಈ ಕೆಲಸವನ್ನು ತಾವು ಮಾಡಿಕೊಡಬೇಕಾಗಿ ಮತ್ತೊಮ್ಮೆ ಕೇಳಿಕೊಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರ ಕಷ್ಟವನ್ನು ಕೇಳಿದ್ದಾರೆ. ಯಾವುದೇ ತರದ ಕಡಿತ ಮಾಡದಂತೆ ಅವರ ಕ್ಷೇತ್ರದಲ್ಲಿ ಆದ್ಯತೆ ಕೊಡಬೇಕು ಮತ್ತು ಕ್ರಿಯಾಯೋಜನೆಯಲ್ಲಿ ಸೇರಿಸಬೇಕೆಂದು ತಿಳಿಸುತ್ತೇನೆ.

ಗದಗ್ ಹುಡ್ಕೋ ಬಡಾವಣೆಯಲ್ಲಿ ಶ್ರೀಮತಿ ಸುಮಂಗಲ ಹಿರೇಮಠ ಎಂಬುವರ ಮನೆಯಿಂದ ಹೊರಗೆ ಹೋದಾಗ ಕಳವು ಮಾಡಿರುವುದು ಮತ್ತು ಒಬ್ಬ ಯುವಕನಿಗೆ ಚೂರಿಯಿಂದ ಇರಿತಕ್ಕೆ ಒಳಗಾದ ವ್ಯಕ್ತಿಗೆ ಪರಿಹಾರ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಅಧ್ಯಕ್ಷರೇ, ಹೋದ ತಿಂಗಳು 30 ರಂದು ಗದಗ್ ಹುಡ್ಕೋ ಬಡಾವಣೆಯಲ್ಲಿ ಶ್ರೀಮತಿ ಸುಮಂಗಲ ಹಿರೇಮಠ ಎಂಬುವವರು ಮಧ್ಯಾಹ್ನದ ವೇಳೆಯಲ್ಲಿ ಮನೆಯಿಂದ ಹೊರಗೆ ಹೋದಾಗ ಕಳವು ಮಾಡಿ, ಕಳ್ಳರು ಓಡಿ ಹೋಗುವ ಮುಂಚೆ ಅಲ್ಲಿ ಒಬ್ಬ ಯುವಕ ನೋಡಿ, ಅವರನ್ನು ಹಿಡಿದ. ಅದರಲ್ಲಿ ಒಬ್ಬ ಕಳ್ಳ, ಅವನಿಗೆ ಚೂರಿ ಹಾಕಿದ. ಆ ಚೂರಿ ಇರಿತಕ್ಕೆ

ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಅವ ಸತ್ತ. ಅವನ ಕುಟುಂಬಕ್ಕೆ ಪರಿಹಾರಧನ ಕೊಡಬೇಕು. ಮತ್ತು ಅವನಿಗೆ ಮರಣೋತ್ತರ ಶೌರ್ಯ ಪ್ರಶಸ್ತಿಯನ್ನು ಕೊಡಬೇಕೆಂದೆ ಗೃಹಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರೋಷನ್ ಬೇಗ್ (ಗೃಹ ಸತಿವರು) : ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ, ಏನು ಕಳ್ಳರನ್ನು ಹಿಡಿಯಲು ಹೋಗಿ ತನ್ನ ಜೀವವನ್ನು ತೆತ್ತವನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಜೊತೆಗೆ, ಅವನಿಗೆ ಮರಣೋತ್ತರ ಶೌರ್ಯ ಪ್ರಶಸ್ತಿಯನ್ನು ಕೊಡಬೇಕು.

ಅಧ್ಯಕ್ಷರು : ಪ್ರಶಸ್ತಿ ಕೊಡುವಾಗ ಕೆ.ಜಿ.ಎಫ್.ನಲ್ಲಿ ನಡೆದ ಘಟನೆ ಬಗ್ಗೆ ಹೋರಾಟ ಮಾಡಿದ ಹುಡುಗನ ಬಗ್ಗೆಯೂ ಪ್ರಶಸ್ತಿ ಕೊಡಿ, ಅವನು ಒಳ್ಳೆಯ ಹುಡುಗ.

ಶ್ರೀ ಆರ್. ರೋಷನ್ ಬೇಗ್ : ಆಯಿತು.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕಾನೂನುಬಾಹಿರವಾಗಿ ಗಣಿ ವ್ಯವಹಾರ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗಣಿ ಪ್ರದೇಶ ಬಹಳ ಇದ್ದು, ಅಲ್ಲಿ ಬೇನಾಮಿಯಾಗಿ ಗಣಿ ಮಾಡುವವರು ಬಹಳ ಜನ ಆಗಿರುವುದರಿಂದ ಆ ಭಾಗ ಕಾನೂನುಬಾಹಿರವಾಗಿ ಗಣಿ ವ್ಯವಹಾರದಲ್ಲಿ ತೊಡಗಿದೆ. ಇದರಿಂದ ಸರ್ಕಾರಕ್ಕೆ ಭಾರಿ ನಷ್ಟವಾಗುವುದರ ಜೊತೆಗೆ, ಬೇಕುಬೇಕಾದವರು ಎಲ್ಲಿಂದಲೋ ಬಂದು, ಲಾರಿ ತೆಗೆದುಕೊಂಡು ಬಂದು ಗಣಿ ಅದರುಗಳನ್ನು ತುಂಬಿಕೊಂಡು ಹೋಗುವಂಥ ಸ್ಥಿತಿ ನಿರ್ಮಾಣವಾಗಿದೆ. ಈ ಸದನದಲ್ಲಿ ಸನ್ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದರು, ಅಲ್ಲಿ ಬಂಗಾರದ ಅದುರೂ ಕೂಡ ಇದೆಯೆಂದು. ನಾವು ಅದಕ್ಕೆ ಕಾವಲು ಹಾಕುತ್ತೇವೆ, ರಕ್ಷಣೆ ಕೊಡುತ್ತೇವೆ ಎಂದು ಹೇಳಿದ್ದರು. ಇವತ್ತು ನೋಡಿದರೆ ನೂರಾರುಲಾರಿಗಳು ಬಂದು ಗಣಿ ಅದುರುಗಳನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಅಲ್ಲಿ 5 ಜನ, 10 ಜನಕ್ಕೆ ಕೂಡ ಲೀಸ್ ಆಗಿಲ್ಲ. ಇದನ್ನು ಸರ್ಕಾರದವರು ತಡೆಯುತ್ತೀರಾ? ಬೊಕ್ಕಸಕ್ಕೆ ಆಗತಕ್ಕ ನಷ್ಟವನ್ನು ಉಳಿಸುತ್ತೀರಾ? ಮತ್ತೆ ಕಾನೂನುಬದ್ಧವಾಗಿ ಯಾರು ಗಣಿ ಗುತ್ತಿಗೆ ತೆಗೆದುಕೊಂಡಿದ್ದಾರೆ, ಅವರಿಗೆ ರಕ್ಷಣೆ ಕೊಡುತ್ತೀರಾ ಎಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ಅಧ್ಯಕ್ಷರೇ, ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಟ್ಟು ಕಬ್ಬಿಣದ ಅದುರು, ಮ್ಯಾಂಗನೀಸ್, ಲೈಮ್‌ಸ್ಟೋನ್ ಇತ್ಯಾದಿ ಮುಖ್ಯ ಖನಿಜಗಳಾದ ಒಟ್ಟು 44 ಖನಿಜಗಳಿಗೆ ಗಣಿ ಗುತ್ತಿಗೆ ನೀಡಲಾಗಿದೆ. ಈ ಗಣಿ ಗುತ್ತಿಗೆಯನ್ನು ಮೈನ್ಸ್ ಅಂಡ್ ಮಿನರಲ್ 1957 ಹಾಗೂ ಖನಿಜ ರಿಯಾಯಿತಿ ನಿಯಮ 90ರ ಅನ್ವಯ ಮಂಜೂರ್ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ವಸೂಲಾಗಿರುವ ರಾಜಸ್ವದ ವಿವರಗಳು 1995-96ರಲ್ಲಿ 2 ಕೋಟಿ 12 ಲಕ್ಷದ 54 ಸಾವಿರ 590, 1996-97ರಲ್ಲಿ ಒಂದು ಕೋಟಿ